## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಲಕ್ಷ್ಮೇಶ್ವರ, ಪೀಠಾಶೀನ ಶಿರಹಟ್ಟಿ

## CC. No.384/2024

ಕರ್ನಾಟಕ ಸರ್ಕಾರದ ಪರ ಲಕ್ಷ್ಮೇಶ್ವರ ಪೋಲಿಸ್ ಠಾಣೆ

……ಫಿರ್ಯಾದಿದಾರ

ವಿರುದ್ಧ

ರಾಜಶೇಖರಯ್ಯ ತಂದೆ ಮಹೇಶ @ ಮಹೇಶಯ್ಯ ಶಿಗ್ಲಿಮಠ ಹಾಗೂ ಇತರರು

…….ಆರೋಪಿತರು

ಆರೋಪಿತರು **:1)** **ರಾಜಶೇಖರಯ್ಯ ತಂದೆ ಮಹೇಶ @ ಮಹೇಶಯ್ಯ ಶಿಗ್ಲಿಮಠ,**
**ವಯಾಃ 24 ವರ್ಷ, ಸಾ: ಲಕ್ಷ್ಮೇಶ್ವರ.**

**2)** **ಶ್ರೀಮತಿ ನೀಲವ್ವ ಕೋಂ. ಮಹೇಶ ಶಿಗ್ಲಿಮಠ,**
**ವಯಾ: 55 ವರ್ಷ, ಸಾ: ಲಕ್ಷ್ಮೇಶ್ವರ.**

**3)** **ಶ್ರೀಮತಿ ಅನ್ನಪೂರ್ಣಾ @ ಶಾಂತಾ ಕೋಂ. ಬಸಯ್ಯ ಹಿರೇಮಠ,**
**ವಯಾ: 28 ವರ್ಷ, ಸಾ: ಕೊಂಚಿಗೇರಿ, ತಾ: ಶಿರಹಟ್ಟಿ**
**ಹಾಲಿ : ಲಕ್ಷ್ಮೇಶ್ವರ.**

**4)** **ಬಸಯ್ಯ ತಂದೆ ಮಹಾದೇವಯ್ಯ ಹಿರೇಮಠ,**
**ವಯಾಃ 28 ವರ್ಷ, ಸಾ: ಕೊಂಚಿಗೇರಿ, ತಾ: ಶಿರಹಟ್ಟಿ**

### ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆ

ಪ್ರಶ್ನೆ1. ಈ ಪ್ರಕರಣದಲ್ಲಿ ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಯನ್ನು ಕೇಳಿರುತ್ತೀರಾ?

ಉತ್ತರಃ ಆರೋಪಿ ನಂ.1 ಕೇಳಿರುತ್ತೇನೆ ಆರೋಪಿ ನಂ.2 ಕೇಳಿರುತ್ತೇನೆ

ಆರೋಪಿ ನಂ.3 ಕೇಳಿರುತ್ತೇನೆ ಆರೋಪಿ ನಂ.4 ಕೇಳಿರುತ್ತೇನೆ

ಪ್ರಶ್ನೆ 2. ಚಾಸಾ-1: ಶ್ರೀಮತಿ ಐಶ್ವರ್ಯ ಕೋಂ. ರಾಜಶೇಖರಯ್ಯ ಶಿಗ್ಲಿಮಠ ಇವರು ಫ್ರಾಸಾ-1 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ಅವರು ಮತ್ತು 1 ನೇ ಆರೋಪಿಯು ದಿಃ 05.10.2023 ರಂದು ಹಿರಿಯರ ಸಮಕ್ಷಮ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದಲ್ಲಿ ಮದುವೆಯಾಗಿರುವುದಾಗಿ, ಮದುವೆಯಾದ ದಿನವೇ ಅವರು ಅವರ ಗಂಡನ ಮನೆಗೆ ಹೋಗಿರುವುದಾಗಿ, 1 ನೇ ಆರೋಪಿತನು ಅವರನ್ನು ಕೇವಲ 1 ತಿಂಗಳ ಮಾತ್ರ ಚೆನ್ನಾಗಿ ನೋಡಿಕೊಂಡಿದ್ದಾಗಿ, 3 ನೇ ಆರೋಪಿತಳು ನಅವರಿಗೆ ಹೊಡೆ ಬಡೆ ಮಾಡಿ, ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 3. ಚಾಸಾ-1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ 4 ನೇ ಆರೋಪಿತನು ಅವರನ್ನು ಅವಾಚ್ಯ ಶಬ್ದಗಳಿಂದ ಬೈದಾಡಿ ಅವರು ಸಂಸಾರ ಮಾಡಲು ಲಾಯಕ್ಕಿಲ್ಲ ಎಂದು ಕಿರುಕುಳ ನೀಡಿರುವುದಾಗಿ, 4 ನೇ ಆರೋಪಿತನು 1 ನೇ ಆರೋಪಿತನಿಗೆ ಶ್ರೀಮಂತ ಹುಡುಗಿಯನ್ನು ತಂದು ಮದುವೆ ಮಾಡುವುದಾಗಿ ತಿಳಿಸಿರುವುದಾಗಿ, ಈ ವಿಚಾರವನ್ನು ಹಿರಿಯರಿಗೆ ತಿಳಿಸಿ, ಹಿರಿಯರು ಬುದ್ದಿ ಹೇಳಿದರು ಆರೋಪಿತರು ಕಿರುಕುಳ ನೀಡುವುದನ್ನು ನಿಲ್ಲಿಸಿರುವುದಿಲ್ಲವೆಂದು, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 4. ಚಾಸಾ-1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ದಿಃ 20.02.2024 ರಂದು ರಾತ್ರಿ 10.00 ಗಂಟೆ ಸುಮಾರಿಗೆ 1 ನೇ ಆರೋಪಿತನು ಅವರಿಗೆ ಬಂದು ಹೊಡೆ ಬಡೆ ಮಾಡಿ ಲೇ ಬೊಸಡಿ ನೀನು ನನ್ನ ಕಣ್ಣ ಮುಂದೆ ಕಾಣಬೇಡ ಅಂತಾ ಕೈಯಿಂದ ಅವರ ಕಪಾಳಕ್ಕೆ, ಬೆನ್ನಿಗೆ ಹೊಡೆದಿದ್ದಾಗಿ, ಚಾಸಾ-2 ಮತ್ತು 3 ನೇ ಆರೋಪಿತರು ಅವರಿಗೆ ಬೈದಾಡಿ ಅವರ ಕತ್ತಿನಲ್ಲಿದ್ದ ತಾಳಿಯನ್ನು ಕಿತ್ತುಕೊಂಡು ಹೊರಗಡೆ ಹಾಕಿರುವುದಾಗಿ, ಅವರು 2 ದಿನ ಮನೆಯ ಹೊರಗಡೆಯೇ ಇದ್ದು, ನಂತರ ಮನೆಗೆ ನೀರು ಕುಡಿಯಲು ಹೋದಾಗ ಅವರು ಅವರನ್ನು ತವರು ಮನೆಗೆ ಕಳುಹಿಸಿದ್ದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 5. ಚಾಸಾ-1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಅವರು ತವರು ಮನೆಯವರು ಅವರನ್ನು ಸೇರಿಸಿಕೊಂಡಿರುವುದಿಲ್ಲವೆಂದು, ಹಿರಿಯರಿಗೆ ವಿಚಾರವನ್ನು ತಿಳಿಸಿದಾಗಲೂ ಸಹ ಯಾವುದೇ ಬೆಲೆ ಕೊಡದ ಕಾರಣ ದಿಃ 23.02.2024 ರಂದು ಲಿಖಿತ ಪಿರ್ಯಾದಿಯನ್ನು ನೀಡಿರುವುದಾಗಿ, ಅವರು ಪಿರ್ಯಾದಿ ನೀಡಿದ 7 ದಿವಸಕ್ಕೆ 1 ನೇ ಆರೋಪಿತನ ಮನೆಯ ಬಳಿ ಚಾಸಾ-2 ಮತ್ತು 3/ಶ್ರೀ ಶಿವಾನಂದ ಕಳ್ಳಿಮನಿ ಮತ್ತು ಶ್ರೀ ಸೋಮಪ್ಪ ಮುಳಗುಂದ ರವರ ಸಮಕ್ಷಮ ಮಧ್ಯಾಹ್ನ 2.30 ರಿಂದ 3.30 ಗಂಟೆಯವರೆಗೆ ಅವರು ತೋರಿಸಿದಂತೆ ಪಂಚನಾಮೆ ಮಾಡಿರುವುದಾಗಿ, ಪಂಚನಾಮೆ ಕಾಲಕ್ಕೆ ಅವರ ಹಾಗೂ 1 ನೇ ಆರೋಪಿತನ ಮದುವೆ ಛಾಯಾಚಿತ್ರಗಳನ್ನು ನೀಡಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 6. ಚಾಸಾ-2: ಶ್ರೀ ಶಿವಾನಂದ ತಂದೆ ಮಹಾದೇವಪ್ಪ ಕಳ್ಳಿಮನಿ ಇವರು ಫ್ರಾಸಾ-2 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ದಿಃ 24.02.2024 ರಂದು ಅವರ ಹಾಗೂ ಚಾಸಾ-3/ಶ್ರೀ ಸೋಮಪ್ಪ ತಂದೆ ಈರಪ್ಪ ಮುಳಗುಂದ ರವರ ಸಮಕ್ಷಮ ಚಾಸಾ-1/ಶ್ರೀಮತಿ ಐಶ್ವರ್ಯ ಶಿಗ್ಲಿಮಠ ರವರು ತೋರಿಸಿದಂತೆ 1 ನೇ ಆರೋಪಿಯ ಮನೆಯ ಬಳಿ ಬೆಳಿಗ್ಗೆ 9.00 ರಿಂದ 10.00 ಗಂಟೆಯ ವರೆಗೆ ಪೋಲಿಸರು ಪಂಚನಾಮೆ ಮಾಡಿರುವುದಾಗಿ, ಸದರಿ ಪಂಚನಾಮೆಗೆ ಅವರು ಸಹಿ ಮಾಡಿರುವುದಾಗಿ, ಪಂಚನಾಮೆ ಕಾಲಕ್ಕೆ ಪೋಲಿಸರು 2 ಛಾಯಾಚಿತ್ರಗಳನ್ನು ತೆಗೆದಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 7. ಚಾಸಾ-2: ಶ್ರೀ ಸೋಮಪ್ಪ ತಂದೆ ಈರಪ್ಪ ಮುಳಗುಂದ ಇವರು ಫ್ರಾಸಾ-3 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ಜನೇವರಿ ತಿಂಗಳಲ್ಲಿ ಚಾಸಾ-1/ಶ್ರೀಮತಿ ಐಶ್ವರ್ಯ ಶಿಗ್ಲಿಮಠ ರವರನ್ನು ಅವರ ಮನೆಗೆ 1 ನೇ ಆರೋಪಿಯು ಕರೆದುಕೊಂಡು ಹೋಗಿರುವುದಾಗಿ, ಅವರು ಚಾಸಾ-1 ರವರು ಕಾಣೆಯಾಗಿದ್ದಾರೆ ಎಂದು ಪೋಲಿಸ ಠಾಣೆಯಲ್ಲಿ ದೂರು ದಾಖಲಿಸಿದ್ದಾಗಿ, ನಂತರ ಚಾಸಾ-1 ಮತ್ತು 1 ನೇ ಆರೋಪಿಗೆ ಮದುವೆ ಮಾಡಿರುವುದಾಗಿ, 1 ನೇ ಆರೋಪಿತನು ಚಾಸಾ-1 ರವರಿಗೆ ವಿನಾಕಾರಣ ಬೈಯುವುದು ಹೊಡೆಯುವುದು ಮಾಡುತ್ತಿದ್ದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 8. ಚಾಸಾ-3 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ನಂತರ ಅವರು ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುವುದಾಗಿ, ದಿಃ 24.02.2024 ರಂದು ಅವರು ಹಾಗೂ ಚಾಸಾ-2/ಶ್ರೀ ಶಿವಾನಂದ ಕಳ್ಳಿಮನಿ ರವರ ಸಮಕ್ಷಮ ಚಾಸಾ-1 ರವರು ತೋರಿಸಿದಂತೆ 1 ನೇ ಆರೋಪಿಯ ಮನೆಯ ಬಳಿ ಬೆಳಿಗ್ಗೆ 9.00 ರಿಂದ 10.00 ಗಂಟೆಯ ವರೆಗೆ ಪೋಲಿಸರು ಪಂಚನಾಮೆ ಮಾಡಿರುವುದಾಗಿ, ಸದರಿ ಪಂಚನಾಮೆಗೆ ಅವರು ಸಹಿ ಮಾಡಿರುವುದಾಗಿ, ಪಂಚನಾಮೆ ಕಾಲಕ್ಕೆ ಪೋಲಿಸರು 2 ಛಾಯಾಚಿತ್ರಗಳನ್ನು ತೆಗೆದಿರುವುದಾಗಿ, ಅವರು ಈ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 9. ಚಾಸಾ-4: ಶ್ರೀ ಈರಪ್ಪ ತಂದೆ ಸೋಮಪ್ಪ ಮುಳಗುಂದ ಇವರು ಪ್ರಾಸಾ-4 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ಕಳೆದ ಒಂದು ವರ್ಷದ ಹಿಂದೆ ಆರೋಪಿತರು ಚಾಸಾ-1 ರವರಿಗೆ ಹೊಡೆ ಬಡೆ ಮಾಡುತ್ತಿದ್ದಾಗಿ, ಚಾಸಾ-1 ರವರನ್ನು ಅವರ ಮನೆಗೆ ಕಳಿಸಿದ್ದಾಗ ಹಿರಿಯರೊಡನೆ ಮಾತುಕತೆ ಮಾಡಿ ಚಾಸಾ-1 ರವರನ್ನು 1 ನೇ ಆರೋಪಿ ಮನೆಗೆ ಕಳುಹಿಸಿರುವುದಾಗಿ, ಪುನಃ ಆರೋಪಿತರು ಅವರ ಮಗಳಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದು, ಚಾಸಾ-1 ರವರು ಆರೋಪಿತರ ಮೇಲೆ ದೂರನ್ನು ನೀಡಿರುವುದಾಗಿ, ಅವರು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 10. ಚಾಸಾ-5: ಶ್ರೀಮತಿ ಉಮಾ ಕೋಂ. ಈರಪ್ಪ ಮುಳಗುಂದ ಇವರು ಫ್ರಾಸಾ-5 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ಕಳೆದ ಒಂದು ವರ್ಷದ ಹಿಂದೆ ಆರೋಪಿತರು ಚಾಸಾ-1 ರವರಿಗೆ ಹೊಡೆ ಬಡೆ ಮಾಡುತ್ತಿದ್ದಾಗಿ, ಚಾಸಾ-1 ರವರನ್ನು ಅವರ ಮನೆಗೆ ಕಳಿಸಿದ್ದಾಗ ಹಿರಿಯರೊಡನೆ ಮಾತುಕತೆ ಮಾಡಿ ಚಾಸಾ-1 ರವರನ್ನು 1 ನೇ ಆರೋಪಿ ಮನೆಗೆ ಕಳುಹಿಸಿರುವುದಾಗಿ, ಪುನಃ ಆರೋಪಿತರು ಅವರ ಮಗಳಿಗೆ ಹೊಡೆ ಬಡೆ ಮಾಡಿರುವುದಾಗಿ, ಚಾಸಾ-1 ರವರು ಆರೋಪಿತರ ಮೇಲೆ ದೂರನ್ನು ನೀಡಿರುವುದಾಗಿ, ಅವರು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಾಗಿ ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 11. ಚಾಸಾ-6: ಶ್ರೀ ಗಂಗಾಧರಯ್ಯ ತಂದೆ ಬಸಲಿಂಗಯ್ಯ ಶಿಗ್ಲಿಮಠ ಇವರು ಫ್ರಾಸಾ-6 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ದಿನಾಂಕಃ 05.10.2023 ರಂದು 1 ನೇ ಆರೋಪಿಯು ಚಾಸಾ-1/ಶ್ರೀಮತಿ ಐಶ್ವರ್ಯ ಶಿಗ್ಲಿಮಠ ರವರನ್ನು ಮದುವೆಯಾಗಿರುವುದಾಗಿ, 3 ತಿಂಗಳು ಸಂಸಾರ ಮಾಡಿ ಬೇರೆಯಾಗಿರುವುದಾಗಿ, ಅವರು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲವೆಂದು ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 12. ಚಾಸಾ-8: ಶ್ರೀ ಚನ್ನಬಸಪ್ಪ ತಂದೆ ಶಂಕ್ರಪ್ಪ ಜಗಲಿ ಇವರು ಫ್ರಾಸಾ-7 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ಚಾಸಾ-1/ಶ್ರೀಮತಿ ಐಶ್ವರ್ಯ ಶಿಗ್ಲಿಮಠ ಮತ್ತು 1 ನೇ ಆರೋಪಿಯು ಪ್ರೀತಿಸುತ್ತಿದ್ದು, ದಿನಾಂಕಃ 05.10.2023 ರಂದು ಸೋಮೇಶ್ವರ ದೇವಸಾನದಲ್ಲಿ ಹಿರಿಯರ ಸಮಕ್ಷಮ ಮದುವೆಯಾಗಿರುವುದಾಗಿ, ಚಾಸಾ-1 ರವರು 1 ನೇ ಆರೋಪಿಯ ಮನೆಗೆ ಬಾಳ್ವೆ ಮಾಡಲು ಹೋಗಿರುವುದಾಗಿ, ಸುಮಾರು 1 ರಿಂದ ಒಂದೂವರೆ ತಿಂಗಳು ಚೆನ್ನಾಗಿ ಬಾಳ್ವೆ ಮಾಡಿರುವುದಾಗಿ, 1 ನೇ ಆರೋಪಿಯು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುವುದು ಮತ್ತು ಹೊಡೆಯುವುದು ಮಾಡುತ್ತಿದ್ದಾಗಿ, ಆರೋಪಿ 2 ಮತ್ತು 3 ರವರು ಚಾಸಾ-1 ರವರಿಗೆ ಚುಚ್ಚು ಮಾತುಗಳಿಂದ ಬೈಯುವುದು ಮಾಡುತ್ತಿದ್ದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 13. ಚಾಸಾ-8 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಅದೇ ರೀತಿ 1 ನೇ ಆರೋಪಿಗೆ ಬೇರೆ ಮದುವೆ ಮಾಡುವುದಾಗಿ ಸಹ ಹೇಳಿ ಮನೆಯಿಂದ ಹೊರ ಹೋಗುವಂತೆ ಹೇಳುತ್ತಿದ್ದಾಗಿ, 4 ನೇ ಆರೋಪಿತನು 1 ನೇ ಆರೋಪಿಯ ಮನೆಗೆ ಆಗಾಗ ಬಂದು ಹೋಗುತ್ತಿದ್ದಾಗಿ, 4 ನೇ ಆರೋಪಿತನು ಸಹ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಬೇರೆ ಮದುವೆ ಮಾಡುವ ವಿಚಾರವನ್ನು ಸಹ ಹೇಳುತ್ತಿದ್ದಾಗಿ, ಚಾಸಾ-4 ರವರು ಈ ವಿಚಾರವನ್ನು ತಿಳಿಸಿದಾಗ, ಊರಿನ ಹಿರಿಯರ ಸಮಕ್ಷಮ 1 ರಿಂದ 3 ನೇ ಆರೋಪಿತರಿಗೆ ಸಾಕಷ್ಟು ಬಾರಿ ಬುದ್ಧಿವಾದ ಹೇಳಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ14. ಚಾಸಾ-8 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ದಿನಾಂಕಃ 20.02.2024 ರಂದುರಾತ್ರಿ 10.00 ಗಂಟೆ ಸುಮಾರಿಗೆ ಚಾಸಾ-1 ರವರು ಚಿರಾಡುತ್ತಾ ಮನೆಗೆ ಹೊರಗಡೆ ಬಂದಿದ್ದಾಗಿ, ಅವರನ್ನು ಕೇಳಿದಾಗ ಅವರು ಆರೋಪಿತರು ಹೊಡೆಬಡಿ ಮಾಡಿ ಮನೆಯಿಂದ ಹೊರ ಹಾಕಿರುತ್ತಾರೆ ಎಂದು ತಿಳಿಸಿರುವುದಾಗಿ, ಆರೋಪಿತರು ಸರಿ ಹೋಗದ ಕಾರಣ, ಪೊಲೀಸ ಠಾಣೆಗೆ ಹೋಗುವಂತೆ ತಿಳಿಸಿರುವುದಾಗಿ, ದಿನಾಂಕಃ 03.04.2024 ರಂದು ಅವರು ಠಾಣೆಗೆ ಹೋಗಿದ್ದಾಗಿ, ಚಾಸಾ-1 ರವರು ನೀಡಿರುವ ದೂರಿನ ಬಗ್ಗೆ ವಿಚಾರ ತಿಳಿದು ಹೇಳಿಕೆಯನ್ನು ನೀಡಿರುವುದಾಗಿ, ಸಾಕ್ಷಿಯು ಮುಂದವರೆದು ದಿನಾಂಕಃ 02.03.2024 ರಂದು ಠಾಣೆಗೆ ಹೋಗಿರುವುದಾಗಿ ಹೇಳಿದ್ದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

| | | |
|---|---|---|
| ಉತ್ತರಃ | ಆರೋಪಿ ನಂ.1 ಸುಳ್ಳು | ಆರೋಪಿ ನಂ.2 ಸುಳ್ಳು |
| | ಆರೋಪಿ ನಂ.3 ಸುಳ್ಳು | ಆರೋಪಿ ನಂ.4 ಸುಳ್ಳು |

ಪ್ರಶ್ನೆ15. ಚಾಸಾ-12: ಶ್ರೀ ಎ.ಎಲ್. ಕರ್ಜಗಿ ಇವರು ಫ್ರಾಸಾ-8 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ದಿಃ 23.02.2024 ರಂದು ಅವರು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1/ಶ್ರೀಮತಿ ಐಶ್ವರ್ಯ ಶಿಗ್ಲಿಮಠ ರವರು ಲಿಖಿತ ದೂರನ್ನು ನೀಡಿದ್ದಾಗಿ, ಅದನ್ನು ಸ್ವೀಕರಿಸಿ ಅವರು ಠಾಣಾ ಮೊಕದ್ದಮೆ ಸಂಖ್ಯೆ 16/2024 ರಂತೆ ಪ್ರ.ವ. ವರದಿಯನ್ನು ತಯಾರಿಸಿ, ನ್ಯಾಯಾಲಯಕ್ಕೆ ಮತ್ತು ಅವರ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುವುದಾಗಿ, ಮುಂದಿನ ತನಿಖೆಗಾಗಿ ಚಾಸಾ-13/ಶ್ರೀ ಈರಪ್ಪ ರಿತ್ತಿ ರವರಿಗೆ ಕಡತವನ್ನು ಹಸ್ತಾಂತರಿಸಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

| | | |
|---|---|---|
| ಉತ್ತರಃ | ಆರೋಪಿ ನಂ.1 ಸುಳ್ಳು | ಆರೋಪಿ ನಂ.2 ಸುಳ್ಳು |
| | ಆರೋಪಿ ನಂ.3 ಸುಳ್ಳು | ಆರೋಪಿ ನಂ.4 ಸುಳ್ಳು |

ಪ್ರಶ್ನೆ 16. ಚಾಸಾ-13: ಶ್ರೀ ಈರಪ್ಪ ತಂದೆ ಹನಮಂತಪ್ಪ ರಿತ್ತಿ ಇವರು ಫ್ರಾಸಾ-9 ಅಂತಾ ಸಾಕ್ಷಿ ವಿಚಾರಣೆಗೆ ಹಾಜರಾಗಿದ್ದು ಅವರು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ದಿನಾಂಕಃ 24.02.2024 ರಂದು ಚಾಸಾ-4/ಶ್ರೀ ಈರಪ್ಪ ಸೋಮಪ್ಪ ಮುಳಗುಂದ ರವರು ತೋರಿಸಿದಂತೆ ಚಾಸಾ-2 ಮತ್ತು 3/ಶ್ರೀ ಶಿವಾನಂದ ಕಳ್ಳೀಮನಿ ಮತ್ತು ಶ್ರೀ ಸೋಮಪ್ಪ ಮುಳಗುಂದ ರವರ ಸಮಕ್ಷಮ ಬೆಳಿಗ್ಗೆ 09.00 ರಿಂದ 10.00 ಗಂಟೆಯವರೆಗೆ ಘಟನಾ ಸ್ಥಳದ ಪಂಚನಾಮೆ ಮಾಡಿ ಪಂಚನಾಮೆ ಕಾಲಕ್ಕೆ ಚಾಸಾ-1/ಶ್ರೀಮತಿ ಐಶ್ವರ್ಯ ಶಿಗ್ಲಿಮಠ ರವರು ಹಾಜರುಪಡಿಸಿದ ಛಾಯಾಚಿತ್ರಗಳು ಹಾಗು ಪಂಚನಾಮೆ ಕಾಲಕ್ಕೆ ಛಾಯಾಚಿತ್ರ ತೆಗೆದಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 17. ಚಾಸಾ-13 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ದಿಃ 24.02.2024 ರಂದು ಚಾಸಾ-2 ಮತ್ತು 3 ರವರಿಗೆ ಪಂಚನಾಮೆಗೆ ಹಾಜರಾಗಲು ನೋಟಿಸ ನೀಡಿ ಪಂಚನಾಮೆಯ ನಂತರ ಹಾಜರಾತಿ ಪ್ರಮಾಣಪತ್ರವನ್ನು ನೀಡಿರುವುದಾಗಿ, ದಿಃ 23.02.2024 ರಂದು ಚಾಸಾ-3 ರಿಂದ ಚಾಸಾ-5/ಶ್ರೀಮತಿ ಉಮಾ ಮುಳಗುಂದ ರವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ, ದಿಃ 23.02.2024 ರಂದು ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ, ದಿಃ 23.02.2024 ರಂದು ಪಂಚನಾಮೆ ಕಾಲಕ್ಕೆ ತೆಗೆದ ಛಾಯಾಚಿತ್ರ ಕುರಿತು ಠಾಣೆಯ ಸಿಬ್ಬಂದಿಯಿಂದ ಪ್ರಮಾಣಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 18. ಚಾಸಾ-13 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ದಿಃ 24.02.2024 ರಂದು ಆರೋಪಿತರಿಗೆ ಕಲಂ.41 (ಎ) ಅಡಿಯಲ್ಲಿ ನೋಟಿಸ ನೀಡಿ ತನಿಖೆಗೆ ಸಹಕರಿಸುವಂತೆ ತಿಳಿಸಿರುವುದಾಗಿ, ದಿಃ 25.02.024 ರಂದು ಚಾಸಾ-6 ಮತ್ತು 7/ಶ್ರೀ ಗಂಗಾಧರಯ್ಯ ಶಿಗ್ಲಿಮಠ ಮತ್ತು ಶ್ರೀ ರಾಮಣ್ಣ ಗೌರಿ ರವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ, ದಿಃ 01.03.2024 ರಂದು ಚಾಸಾ-1 ರವರ ಮದುವೆಯ ಛಾಯಾಚಿತ್ರಗಳನ್ನು ಹಾಜರುಪಡಿಸಿದ ಕುರಿತು ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ 19. ಚಾಸಾ-13 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, ದಿಃ 02.03.2024 ರಂದು ಚಾಸಾ-8 ಮತ್ತು 9/ಶ್ರೀ ಚನ್ನಬಸಪ್ಪ ಜಗಲಿ ಮತ್ತು ಶ್ರೀ ಸಿದ್ದನಗೌಡ ಬಳ್ಳೋಳ್ಳಿ ರವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ, ದಿಃ 10.03.2024 ರಂದು ಚಾಸಾ-10 ಮತ್ತು 11/ಶ್ರೀ ಶಿವಯೋಗಿ ಅಂಕಲಕೋಟಿ ಮತ್ತು ಶ್ರೀ ತಮ್ಮಯ್ಯ ಶಿಗ್ಲಿಮಠ ರವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ, ದಿಃ 01.04.2024 ರಂದು ಆರೋಪಿತರು ನಿರೀಕ್ಷಣಾ ಜಾಮೀನು ಪಡೆದು ಹಾಜರಾಗಿದ್ದು ದಸ್ತಗಿರಿ ನಿಯಮ ಪಾಲಿಸಿ ಬಿಡುಗಡೆ ಮಾಡಿರುವುದಾಗಿ, ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಸಾಕ್ಷಾಧಾರಗಳು ಕಂಡು ಬಂದ ಕಾರಣ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದಾಗಿ, ಸಾಕ್ಷಿಯನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರಃ ಆರೋಪಿ ನಂ.1 ಸುಳ್ಳು ಆರೋಪಿ ನಂ.2 ಸುಳ್ಳು

ಆರೋಪಿ ನಂ.3 ಸುಳ್ಳು ಆರೋಪಿ ನಂ.4 ಸುಳ್ಳು

ಪ್ರಶ್ನೆ-20: ನಿಮ್ಮ ಪರ ಸಾಕ್ಷಿವಿಚಾರಣೆಯನ್ನು ಮಾಡಿಸುತ್ತೀರಾ?

ಉತ್ತರಃ ಆರೋಪಿ ನಂ.1 ಇಲ್ಲ ಆರೋಪಿ ನಂ.2 ಇಲ್ಲ

ಆರೋಪಿ ನಂ.3 ಇಲ್ಲ ಆರೋಪಿ ನಂ.4 ಇಲ್ಲ

ಪ್ರಶ್ನೆ-21: ನೀವು ಮತ್ತೇನಾದರೂ ಹೇಳಬಯಸುವಿರಾ?

ಉತ್ತರಃ ಆರೋಪಿ ನಂ.1

ಆರೋಪಿ ನಂ.2

ಆರೋಪಿ ನಂ.3

ಆರೋಪಿ ನಂ.4

} ನಾವು ಯಾವುದೇ ತೊಂದರೆ ನೀಡಿಲ್ಲ ಸುಳ್ಳು ಕೇಸು ದಾಖಲಿಸಿರುತ್ತಾರೆ

(ತೆರೆದ ನ್ಯಾಯಾಲಯದಲ್ಲಿ ಈ ಮೇಲಿನ ಪ್ರಶ್ನೆಗಳನ್ನು ಓದಿ ಹೇಳಿದ ನಂತರ ಅವನು/ ಅವಳು ಕೊಟ್ಟ ಉತ್ತರಗಳನ್ನು ಕೊಟ್ಟಂತೆ ಈ ದಿನ **19.05. 2026** ರಂದು ಪಡೆದುಕೊಳ್ಳಲಾಯಿತು)

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಲಕ್ಷ್ಮೇಶ್ವರ.